**ಓ .ಎಸ್. ನಂ. 229/2016 ಡಿ.ಡಬ್ಲೂ-1 ಹೆಸರು -ನಿರ್ಮಲ**

**ಸಾಕ್ಷಿಯನ್ನು ದಿನಾಂಕಃ 04.11.2022 ರಂದು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆ ಶ್ರೀ. ಜೆ ಕೆ ಬಿ ವಕೀಲರಿಂದಃ-**

ನಾನು ನನ್ನ ಪ್ರಮಾಣ ಪತ್ರಿಕೆಯನ್ನು ಸಲ್ಲಿಸಿರುತ್ತೇನೆ, ಇದರಲ್ಲಿರುವ ಎಲ್ಲಾ ಸಂಗತಿಗಳು ಸತ್ಯವಾಗಿರುತ್ತದೆ ಪ್ರಮಾಣ ಪತ್ರದಲ್ಲಿ ಇರುವ ಸಹಿಗಳು ನನ್ನದೇ ಆಗಿರುತ್ತವೆ .

**ಪ್ರಮಾಣ ಪತ್ರಿಕೆಯೊಂದಿಗೆ ಸಲ್ಲಿಸಿರುವಂತಹ ದಾಖಲಾತಿಯನ್ನು ಈ ಕೆಳಕಂಡಂತೆ ಗುರುತಿಸಲಾಯಿತು.**

1. 3 ನೇ ಪ್ರತಿವಾದಿ ನನ್ನ ಹೆಸರಿಗೆ ಜಾರಿ ಮಾಡಿಕೊಟ್ಟಿರುವ ಸಾಮಾನ್ಯ ಮುಕ್ತ ಹರ್ನಾಮೆಯನ್ನು ಹಾಜರು ಮಾಡಿರುತ್ತೇನೆ. ಇದನ್ನು ನಿಡಿ 1 ಎಂದು ಗುರುತಿಸಲಾಯಿತು.

2. ದಿನಾಂಕ 10.05.1976 ರ ನೋಂದಣಿ ಕ್ರಯ ಪತ್ರದ ದೃಡೀಕೃತ ನಕಲನ್ನು ಹಾಜರು ಮಾಡಿರುತ್ತೇನೆ. ಇದನ್ನು ನಿಡಿ 2 ಎಂದು ಗುರುತಿಸಲಾಯಿತು.

3. ದಿನಾಂಕ 07.11.1975 ರ ನೋಂದಣಿ ಕ್ರಯ ಪತ್ರದ ದೃಡೀಕೃತ ನಕಲನ್ನು ಹಾಜರು ಮಾಡಿರುತ್ತೇನೆ. ಇದನ್ನು ನಿಡಿ 3 ಎಂದು ಗುರುತಿಸಲಾಯಿತು.

4. ದಿನಾಂಕ 13.12.1962 ರ ನೋಂದಣಿ ಕ್ರಯ ಪತ್ರದ ದೃಡೀಕೃತ ನಕಲನ್ನು ಹಾಜರು ಮಾಡಿರುತ್ತೇನೆ. ಇದನ್ನು ನಿಡಿ 4 ಎಂದು ಗುರುತಿಸಲಾಯಿತು.

5. ಸರ್ವೆ ನಂಬರ್ 190/1 ಕ್ಕೆ ಸಂಬಂಧಿಸಿದಂತೆ ಆರ್ ಟಿ ಸಿ ಮತ್ತು ಪಟ್ಟ ಪುಸ್ತಕದ ದೃಡೀಕೃತ ನಕಲನ್ನು ಹಾಜರು ಮಾಡಿರುತ್ತೇನೆ. ಇವುಗಳನ್ನು ನಿಡಿ 5 ರಿಂದ 13 ಎಂದು ಗುರುತಿಸಲಾಯಿತು.

6. ಮಾನ್ಯ ಕರ್ನಾಟಕ ಉಚ್ಚ ನ್ಯಾಯಾಲಯದ ಆರ್ ಎಸ್ ಎ 768/2003 ರ ಆದೇಶದ ದೃಡೀಕೃತ ನಕಲನ್ನು ಹಾಜರು ಮಾಡಿರುತ್ತೇನೆ. ಇದನ್ನು ನಿಡಿ 14 ಎಂದು ಗುರುತಿಸಲಾಯಿತು.

7. ಅಸಲು ದಾವಾ ಸಂಖ್ಯೆ 186/1997 ರ ದೃಡೀಕೃತ ನಕಲನ್ನು ಹಾಜರು ಮಾಡಿರುತ್ತೇನೆ. ಇದನ್ನು ನಿಡಿ 15 ಎಂದು ಗುರುತಿಸಲಾಯಿತು.

8. ದಿನಾಂಕ 09.04.1976 ರ ಭೂ ನ್ಯಾಯ ಮಂಡಳಿಯ ಅದೇಶದ ಪ್ರತಿಯನ್ನು ಹಾಜರು ಮಾಡಿರುತ್ತೇನೆ. ಇದನ್ನು ನಿಡಿ 16 ಎಂದು ಗುರುತಿಸಲಾಯಿತು.

9. ಪ್ರತಿವಾದಿಯರ ತಂದೆಗೆ ಹೆಸರಿಗೆ ಜಾರಿ ಮಾಡಿಕೊಟ್ಟಿರುವ ಆಧಾರ ಪತ್ರಗಳನ್ನು ಹಾಜರು ಮಾಡಿರುತ್ತೇನೆ. ಇದನ್ನು ಒಟ್ಟಾಗಿ ನಿಡಿ 17 ಎಂದು ಗುರುತಿಸಲಾಯಿತು.

10. ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘ ನಿಯಮಿತ, ಹದಿನಾರು ಗ್ರಾಮದವರು ನೀಡಿರುವಂತಹ ಪತ್ರಗಳನ್ನು ಹಾಜರು ಮಾಡಿರುತ್ತೇನೆ. ಇದನ್ನು ನಿಡಿ 18 ರಿಂದ 20 ಎಂದು ಗುರುತಿಸಲಾಯಿತು.

11. ದಾವಾ ಸ್ವತ್ತುಗಳಿಗೆ ಸಂಬಂಧಿಸಿದಂತೆ ಪಹಣಿಗಳನ್ನು ಹಾಜರು ಮಾಡಿರುತ್ತೇನೆ. ಇದನ್ನು ನಿಡಿ 21 ರಿಂದ 29 ಎಂದು ಗುರುತಿಸಲಾಯಿತು.

12. 02 ಹಕ್ಕು ಬದಲಾವಣೆಯ ವಹಿಯ ದೃಡೀಕೃತ ನಕಲನ್ನು ಹಾಜರು ಮಾಡಿರುತ್ತೇನೆ. ಇದನ್ನು ನಿಡಿ 30 ಮತ್ತು 31 ಎಂದು ಗುರುತಿಸಲಾಯಿತು.

13. ಹಿಡುವಳಿ ಜಮೀನಿನ ಚೆಕ್ಕು ಬಂಧಿ ಕುರಿತಾಗಿ ದಾಖಲೆಗಳನ್ನು ಹಾಜರು ಮಾಡಿರುತ್ತೇನೆ. ಇದನ್ನು ನಿಡಿ 32 ಎಂದು ಗುರುತಿಸಲಾಯಿತು.

14. ದಾವಾ ಸ್ವತ್ತಿಗೆ ಸಂಬಂಧಿಸಿದಂತೆ ಮತ್ತೊಂದು ಪಹಣಿಯನ್ನು ಹಾಜರು ಮಾಡಿರುತ್ತೇನೆ. ಇದನ್ನು ನಿಡಿ 33 ಎಂದು ಗುರುತಿಸಲಾಯಿತು.

15. ದಾವಾ ಸ್ವತ್ತಿಗೆ ಸಂಬಂಧಿಸಿದಂತೆ ಆಸ್ತಿ ತೆರಿಗೆ ದೃಡೀಕೃತ ನಕಲನ್ನು ಹಾಜರು ಮಾಡಿರುತ್ತೇನೆ. ಇದನ್ನು ನಿಡಿ 34 ಎಂದು ಗುರುತಿಸಲಾಯಿತು.

16. ದಾವಾ ಸ್ವತ್ತಿಗೆ ಕಂದಾಯ ಪಾವತಿಸಿರುವ ಕುರಿತು ರಶೀದಿಗಳನ್ನು ಹಾಜರು ಮಾಡಿರುತ್ತೇನೆ. ಇದನ್ನು ನಿಡಿ 35 ರಿಂದ 41 ರವರೆಗೆ ಗುರುತಿಸಲಾಯಿತು.

17. ಬಸಪ್ಪರವರಿಗೆ ಸಂಬಂಧಿಸಿದ ನೌಕರರ ಭವಿಷ್ಯ ನಿಧಿಯ ದಾಖಲಾತಿಯನ್ನು ಮತ್ತು ಬಸಪ್ಪರವರು ಸಾಲ ಪಾವತಿಸಿರುವ ಕುರಿತಾಗಿ ರಶೀದಿಯನ್ನು ಹಾಜರು ಮಾಡಿರುತ್ತೇನೆ. ಇದನ್ನು ನಿಡಿ 42 ಮತ್ತು 43 ಎಂದು ಗುರುತಿಸಲಾಯಿತು.

18. ಬಸಪ್ಪರವರ ಕಂದಾಯ ಪಾವತಿಸಿರುವ ಕುರಿತಾಗಿ 04 ಕಂದಾಯ ರಶೀದಿಯನ್ನು ಹಾಜರು ಮಾಡಿರುತ್ತೇನೆ. ಇದನ್ನು ನಿಡಿ 44 ರಿಂದ 47 ಎಂದು ಗುರುತಿಸಲಾಯಿತು.

19. ಶ್ರೀಕಂಠೇಶ್ವರ ಪ್ರಾಥಮಿಕ ಬ್ಯಾಂಕ್ ನವರು ಬಸಪ್ಪನವರಿಗೆ ನೀಡಿದ ನೋಟೀಸ್ ಮತ್ತು ಸದರಿ ನೋಟೀಸ್ ಕುರಿತಾಗಿ ಸಾಲವನ್ನುಮರು ಪಾವತಿ ಮಾಡಿರುವ ಬಗ್ಗೆ ದಾಖಲಾತಿಯನ್ನು ಹಾಜರು ಮಾಡಿರುತ್ತೇನೆ. ಇದನ್ನು ನಿಡಿ 48 ರಿಂದ 52 ಎಂದು ಗುರುತಿಸಲಾಯಿತು.

20. ದಾವಾ ಸ್ವತ್ತಿಗೆ ಕಂದಾಯ ಪಾವತಿಸಿರುವ ಕುರಿತು 4 ರಶೀದಿಗಳನ್ನು ಹಾಜರು ಮಾಡಿರುತ್ತೇನೆ. ಇದನ್ನು ನಿಡಿ 53 ರಿಂದ 56 ಎಂದು ಗುರುತಿಸಲಾಯಿತು.

21. 03 ಪಟ್ಟ ಪುಸ್ತಕಗಳನ್ನು ಹಾಜರು ಮಾಡಿರುತ್ತೇನೆ. ಇದನ್ನು ನಿಡಿ 57 ರಿಂದ 59 ಎಂದು ಗುರುತಿಸಲಾಯಿತು.

22. ದಿನಾಂಕ 13.11.2013 ರ ಮರಣ ಶಾಸನ ಪತ್ರವನ್ನು ಹಾಜರು ಮಾಡಿರುತ್ತೇನೆ. ಇದನ್ನು ನಿಡಿ 60 ಎಂದು ಗುರುತಿಸಲಾಯಿತು.

23. ಬಸಪ್ಪರವರಿಗೆ ಸಂಬಂಧಿಸಿದ ಮರಣ ಪ್ರಮಾಣ ಪತ್ರವನ್ನು ಹಾಜರು ಮಾಡಿರುತ್ತೇನೆ. ಇದನ್ನು ನಿಪಿ 61 ಎಂದು ಗುರುತಿಸಲಾಯಿತು.

24. ದಿನಾಂಕ 14.03.2018 ನೋಂದಣಿ ಮರಣ ಶಾಸನ ಪತ್ರವನ್ನು ಹಾಜರು ಮಾಡಿರುತ್ತೇನೆ. ಇದನ್ನು ನಿಡಿ 62 ಎಂದು ಗುರುತಿಸಲಾಯಿತು.

25. ಪಾರ್ವತಮ್ಮನವರಿಗೆ ಸಂಬಂಧಿಸಿ ಮರಣ ಪ್ರಮಾಣ ಪತ್ರವನ್ನು ಹಾಜರು ಮಾಡಿರುತ್ತೇನೆ. ಇದನ್ನು ನಿಡಿ 63 ಎಂದು ಗುರುತಿಸಲಾಯಿತು.

26. ಬಸಪ್ಪರವರಿಗೆ ಸಂಬಂಧಿಸಿದ ಉಪಧನ ಪಾವತಿಗೆ ಕುರಿತಾಗಿ ದಾಖಲಾತಿಯನ್ನು ಹಾಜರು ಮಾಡಿರುತ್ತೇನೆ. ಇದನ್ನು ನಿಡಿ 64 ಎಂದು ಗುರುತಿಸಲಾಯಿತು.

(ಪ್ರತಿವಾದಿ ವಕೀಲರು ಮುಂದುವರೆದ ಮುಖ್ಯ ವಿಚಾರಣೆಗಾಗಿ ಕಾಲಾವಕಾಶ ಕೋರಿದ್ದು ನೀಡಲಾಯಿತು )

ನನ್ನ ಉಕ್ತಲೇಖನದ ಮೇರೆಗೆ ತೆರದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.

**ಓ ಹೇ ಕೇ ಸ ಇದೆ ಎಂ ಒ**

ಸಹಿ/-

**ಪ್ರಧಾನ ಸಿ.ಜೆ ಮತ್ತು ಪ್ರದನ್ಯಾದಂ,**

**ನಂಜನಗೂಡು**